# ಸರಕಾರಿ ಮಾದರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಭೂತ್ರಾಮನಹಟ್ಟಿ–29010402001

## ಬೆಳಗಾವಿ ಗ್ರಾಮೀಣ

## “ಶಾಲಾ ವಿಶೇಷ ಚಟುವಟಿಕೆಗಳು”




ಮಾಹಿತಿ
ಶ್ರೀ ಬಸವರಾಜ. ಶಿವಪ್ಪ. ಸುಂಗಾರಿ.
ಪ್ರಧಾನ ಗುರುಗಳು,
ಸ.ಮಾ.ಕ.ಹಿ.ಪ್ರಾ.ಶಾಲೆ, ಭೂತ್ರಾಮನಹಟ್ಟಿ,
ಮೋ.ನಂ.–8951875727

# ಸರಕಾರಿ ಮಾದರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ಭೂತ್ರಾಮನಹಳ್ಳಿ

ಮಕ್ಕಳ ಕಲಿಕೆ ಪರಿಣಾಮಕಾರಿಯಾಗಲು ನಮ್ಮ ಶಾಲೆಯಲ್ಲಿ ಹಲವಾರು ಪಠ್ಯಪೂರಕ ಹಾಗೂ ಪಠ್ಯೇತರ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಇವುಗಳಿಂದ ಮಕ್ಕಳಿಗೆ ಶಾಲೆಯ ಬಗ್ಗೆ ಆಸಕ್ತಿ ಉಂಟಾಗಿ ಧನಾತ್ಮಕ ಮನೋಭಾವನೆಯಿಂದ ಹೊಸ ಹೊಸ ವಿಚಾರಗಳನ್ನು ತಿಳಿದುಕೊಂಡು ತಮ್ಮ ಜ್ಞಾನ ವೃದ್ಧಿಸಿಕೊಳ್ಳಲು ಅನುಕೂಲವಾಗುತ್ತದೆ.

ವಿನೂತನ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರಿಂದ ನಮ್ಮ ಶಾಲೆಯ ಮಕ್ಕಳ ಶೈಕ್ಷಣಿಕ ಪ್ರಗತಿ ಉಂಟಾಗುತ್ತದೆ. ಜೊತೆಗೆ ಮಕ್ಕಳು ನಿಯಮಿತವಾಗಿ ಶಾಲೆಗೆ ಹಾಜರಿದ್ದು ಕಲಿಕೆಯಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಾರೆ.

- **ಆಹಾರ ಮೇಳ**
- **ವಿಜ್ಞಾನದ ಪ್ರಯೋಗಗಳು**
- **ಕನ್ನಡದ ಶತಾಧಿಪತಿ**
- **ಅದಲು – ಬದಲು ದಿನ (Miss Match Day)**
- **No Bag Day**
- **Field Visit (ಕ್ಷೇತ್ರ ವೀಕ್ಷಣೆ)**
- **ಸಾಧಕರ ಜೊತೆ ಸೋಮವಾರ**
- **ಭಾರತೀಯ ನೋಟುಗಳ ಪರಿಚಯ**
- **ರಂಗೋಲಿಯಲ್ಲಿ ಅರಳಿದ ವಿಜ್ಞಾನದ ಚಿತ್ರಗಳು**
- **ಪರಿಸರ ಸ್ನೇಹಿ ಚಟುವಟಿಕೆಗಳು**
- **ಧಾನ್ಯಗಳಿಂದ, ಪುಷ್ಪಗಳಿಂದ ರಂಗೋಲಿ ಬಿಡಿಸುವುದು**
- **ಕವಿಗಳು, ಸಮಾಜ ಸುಧಾರಕರು ಮತ್ತು ವಿಜ್ಞಾನಿಗಳ ಪರಿಚಯ**
- **ವಿಜ್ಞಾನ ಮಾದರಿಗಳ ಪ್ರದರ್ಶನ ಮೇಳ**
- **ಯೋಗ ದಿನಾಚರಣೆ**
- **ಶೈಕ್ಷಣಿಕ ಪ್ರವಾಸ**
- **ಜಿಐಟಿ ಮತ್ತು ಜೆಎನ್‌ಎಂಸಿ ಕಾಲೇಜುಗಳಿಗೆ ಬೇಟಿ**
- **ನಮ್ಮ ಶಾಲೆಗೆ ಗಣ್ಯ ವ್ಯಕ್ತಿಗಳ ಬೇಟಿ**
- **ಶಾಲಾ ಆವರಣದಲ್ಲಿ ಬಣ್ಣ ಬಣ್ಣದ ರಂಗೋಲಿಗಳು**
- **ಹಸಿರು ಕ್ರಾಂತಿಯ ಇಕೋಕ್ಲಬ್ ಚಟುವಟಿಕೆಗಳು**
- **ಮಾದರಿ ಸಂತೆ**

## * <u>ಆಹಾರ ಮೇಳ</u> :–

ನಮ್ಮ ಶಾಲೆಯಲ್ಲಿ ಏರ್ಪಡಿಸಿದ ಆಹಾರ ಮೇಳದಲ್ಲಿ ಒಂದನೇಯ ತರಗತಿಯ ಚಿಕ್ಕ ಮಕ್ಕಳಿಂದ ಹಿಡಿದು ೮ನೇ ತರಗತಿಯ ದೊಡ್ಡ ಮಕ್ಕಳ ವರೆಗೂ ಭಾಗವಹಿಸುತ್ತಾರೆ. ಈ ಆಹಾರ ಮೇಳದಲ್ಲಿ ಮಕ್ಕಳು ಧಾನ್ಯಗಳು, ತರಕಾರಿಗಳು, ಹಣ್ಣುಗಳು ಹಾಗೂ ಸೊಪ್ಪುಗಳಿಂದ ತಯಾರಿಸಿದ ಆಹಾರ ಮತ್ತು ಅದರ ವಿಶೇಷತೆ ಮುಂತಾದ ಎಲ್ಲಾ ವಿಷಯಗಳ ಬಗ್ಗೆ ತಿಳಿಸಿಕೊಡುತ್ತಾರೆ. ಇದರಿಂದ ಮಕ್ಕಳಲ್ಲಿ ಸೃಜನಶೀಲತೆ ಉಂಟಾಗುತ್ತದೆ.

ಆಹಾರ ಮೇಳದಿಂದ ಆಹಾರದಲ್ಲಿರುವ ಪೌಷ್ಠಿಕಾಂಶ, ಪ್ರೋಟಿನ್ಸ್, ವಿಟಮಿನ್ಸ್, ಕೊಬ್ಬು, ಖನಿಜ ಮುಂತಾದ ಅಂಶಗಳು ಯಾವವು? ಯಾವ ಆಹಾರದಿಂದ ನಮಗೆ ಏನು ಉಪಯೋಗ, ಯಾವರ ಆಹಾರ ಪದಾರ್ಥಗಳಿಂದ ಶಕ್ತಿ ದೊರೆಯುತುತದೆ. ದೇಹದ ಬೆಳವಣಿಗೆ ಹೊಂದುತ್ತದೆ. ಮುಂತಾದ ಅಂಶಗಳಗೆ ಆಹಾರ ತುಂಬಾ ಅವಶ್ಯಕ ಎಂಬುದನ್ನು ತಿಳಿದುಕೊಂಡು ಯೋಗ್ಯ ಆಹರ ಪದ್ಧತಿಯನ್ನು ರೂಢಿಸಿಕೊಳ್ಳುತ್ತಾರೆ.







* **ವಿಜ್ಞಾನದ ಪ್ರಯೋಗಗಳು** :-

ನಮ್ಮ ಶಾಲೆಯಲ್ಲಿ ಮಕ್ಕಳಿಗೆ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸಿ ಅವರನ್ನು ವೈಜ್ಞಾನಿಕತೆಯಡೆಗೆ ಸೆಳೆಯುವಂತೆ ಮಾಡಲು "ಪರಮಾಣು " ವಿಜ್ಞಾನ ಪ್ರಯೋಗಾಲಯಿದೆ. ಜೊತೆಗೆ ವಿಜ್ಞಾನ ಮತ್ತು ತಂತ್ರಜ್ಞಾನ ಶಿಕ್ಷಕರಾದ ಶ್ರೀ. ಬಿ.ಎಸ್. ಸುಂಗಾರಿ ಸರ್ ಅವರ ವಿನೂತನ ಚಟುವಟಿಕೆಗಳಿಂದಾಗಿ ಮಕ್ಕಳಲ್ಲಿ ವಿಜ್ಞಾನದ ಮೇಲೆ ಅತೀವ ಪ್ರೀತಿ ಹಾಗೂ ಆಸಕ್ತಿ ಉಂಟಾಗಿದೆ. ವಿಜ್ಞಾನದ ಹೊಸ ಹೊಸ ಪ್ರಯೋಗಗಳನ್ನು ಮಕ್ಕಳು ಸ್ವತ: ಮಾಡಿ ವಿವರಣೆ ನೀಡುತ್ತಾ, ಶಾಲಾ ಆವರಣದಲ್ಲಿರುವ ಪ್ರತಿಯೊಂದು ವಿಷಯ ವಸ್ತುವನ್ನು ವೈಜ್ಞಾನಿಕವಾಗಿ ವಿವರಿಸುತ್ತಾರೆ.

ಉದಾ: ಆವರಣದಲ್ಲಿರುವ ಬಾದಾಮಿ ಮರ, ಮಣ್ಣು, ನೀರು ಹೀಗೆ ವಿವಿಧ ಅಂಶಗಳ ಕುರಿತು ವೈಜ್ಞಾನಿಕ ವಿಚಾರಗಳನ್ನು ಅತೀ ಉತ್ಸುಕತೆಯಿಂದ ವ್ಯಕ್ತಪಡಿಸುತ್ತಾರೆ. ವಿಶೇಷ ಪ್ರಯೋಗಕ್ಕೆ ವಿಶೇಷ ಬಹುಮಾನಗಳನ್ನು ನೀಡಿ ನಮ್ಮ ಶಿಕ್ಷಕರು ಮಕ್ಕಳನ್ನು ಇನ್ನೂ ಹೊಸ ಹೊಸ ಪ್ರಯೋಗಗಳನ್ನು ಮಾಡಲು ಪ್ರೋತ್ಸಾಹ ನೀಡಲಾಗುತ್ತದೆ.



## * **ಕನ್ನಡದ ಶತಾಧಿಪತಿ**:–

ಕನ್ನಡ ಸುವರ್ಣ ವಾಹಿನಿಯ ಕನ್ನಡದ ಕೋಟ್ಯಾಧಿಪತಿ ಕಾರ್ಯಕ್ರಮವನ್ನು ನಟಸಾರ್ವಭೌಮ ಪುನಿತರಾಜ್ ಕುಮಾರ ಅವರು ನಡೆಸಿಕೊಡುವಂತೆ ನಮ್ಮ ಭೂತ್ರಾಮನಹಟ್ಟಿ ಶಾಲೆಯ ಶತಾಧಿಪತಿ ಕಾರ್ಯಕ್ರಮವನ್ನು ನಮ್ಮ ಶಾಲೆಯ ಪ್ರಭಾರಿ ಮುಖ್ಯೋಪಾಧ್ಯಾಯರಾದ ಶ್ರೀ. ಬಿ.ಎಸ್.ಸುಂಗಾರಿ ಸರ್ ಅವರು ನಡೆಸಿಕೊಡುತ್ತಾರೆ. ಕನ್ನಡದ ಕೋಟ್ಯಾಧಿಪತಿ ಮಾದರಿಯಲ್ಲಿಯೇ ಈ ಚಟುವಟಿಕೆ ನಡೆಯುತ್ತದೆ. ಮಕ್ಕಳ ಪ್ರಗತಿ ಅವರ ತರಗತಿಯಲ್ಲಿನ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ ಪರೀಕ್ಷೆಗಳ ಫಲಿತಾಂಶಗಳನ್ನು ಗಮನದಲ್ಲಿಟ್ಟುಕೊಂಡು ಮಕ್ಕಳನ್ನು 'ಹಾಟ್ ಶೀಟ್'ಗೆ ಆಯ್ಕೆ ಮಾಡಲಾಗುತ್ತದೆ ಪ್ರಶ್ನೆಗಳನ್ನು ಆಯಾ ಮಕ್ಕಳ ಪಠ್ಯಕ್ರಮಕ್ಕನುಗುಣವಾಗಿ ಆಯ್ದುಕೊಂಡು ನಡೆಸಲಾಗುತ್ತದೆ. ಒಟ್ಟು ಹತ್ತು ಪ್ರಶ್ನೆಗಳದ್ದು ಪ್ರತಿ ಪ್ರಶ್ನೆಯ ಉತ್ತರಕ್ಕೂ ಹತ್ತು ರೂ.ಬಹುಮಾನ ನೀಡಲಾಗುತ್ತದೆ.

ಇದರಿಂದ ಪ್ರತಿಯೊಂದು ಮಗುವಿನಲ್ಲಿ ಕಲಿಕೆ ಬಗ್ಗೆ ಆಸಕ್ತಿ ಮಾಡಿ ತಾನು ಹಾಟ್ ಶೀಟ್ ನಲ್ಲಿ ಕುಳಿತು ಆಟ ಆಡಿ ದುಡ್ಡು ಗೆಲ್ಲಬೇಕು ಆಸೆ ಮೂಡಿ ಸದಾ ಅಧ್ಯಾಯಶೀಲರಾಗುತ್ತಾರೆ.



*  **ಅದಲು – ಬದಲು ದಿನ (Miss Match Day) :**

ನಮ್ಮ ಶಾಲೆಯಲ್ಲಿ ವಿನೂತನ ಹಾಗೂ ವಿಶೇಷವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತದೆ. ಅದೇ 'Miss Match Day ' ಇದರ ವಿಶೇಷತೆ ಏನೆಂದರೆ ಮಕ್ಕಳು ಒಂದಕ್ಕೊಂದು ಸಂಬಂಧವಿಲ್ಲದಂತೆ ಹೊಂದಾಣಿಕೆಯಾಗದಂತೆ ತಯಾರಾಗಿ ಶಾಲೆಗೆ ಬರುವುದು..

ಈ ಚಟುವಟಿಕೆ ಮಕ್ಕಳಿಗೆ ತುಂಬಾ ಮನರಂಜನಾದಾಯುಕವಾಗಿರುತ್ತದೆ. ಅದರ ಜೊತೆಗೆ ಮಕ್ಕಳಲ್ಲಿ Opposite Words ಗಳ ಪರಿಕಲ್ಪನೆ ಮೂಡುತ್ತದೆ. ವಿರುದ್ಧ ಪದಗಳಿಗೆ ಉತ್ತಮ ನಿದರ್ಶನಗಳು ಆ ದಿನ ನಮಗೆ ಕಾಣಸಿಗುತ್ತವೆ. ಹಾಗೂ ಪ್ರತಿಯೊಬ್ಬ ಮಗುವಿನ ಸೃಜನಶೀಲತೆ ಇಲ್ಲಿ ನಮಗೆ ಕಂಡು ಬರುತ್ತದೆ.





* **No Bag Day :-**

ಸರ್ಕಾರದಿಂದ ಅಧಿಕೃತವಾಗಿ ಜಾರಿಗೆ ಬಂದ ಈ ಯೋಜನೆಯನ್ನು ನಮ್ಮ ಶಾಲೆಯಲ್ಲಿ ಅದಕ್ಕಿಂತ ಪೂರ್ವದಲ್ಲಿಯೂ ನಾವು ಈ ಚಟುವಟಿಕೆಯನ್ನು ಹಮ್ಮಿಕೊಳ್ಳುತ್ತಿದ್ದೇವು.

ಪ್ರತಿಯೊಬ್ಬ ವಿದ್ಯಾರ್ಥಿಗೆ 'No Bag Day' ಅಂದರೆ ಏನೋ ಆಸಕ್ತಿ, ಕುತೂಹಲ ಕಾರಣ ಪ್ರತಿ ಶನಿವಾರ ಮಕ್ಕಳು ಶಾಲೆಗೆ ಬ್ಯಾಗ್ ಇಲ್ಲದೆ ಬಂದು ವಿವಿಧ ರೀತಿಯ ಕಲಿಕೆಗೆ ಪೂರಕವಾಗುವ ಚಟುವಟಿಕೆಗಳಲ್ಲಿ ಭಾಗವಹಿಸಿ ಕಲಿಕೆಯ ಜೊತೆಗೆ ಮನರಂಜನೆಯನ್ನು ಪಡೆಯುತ್ತಾರೆ. ಆದ್ದರಿಂದಲೇ ಮಕ್ಕಳೆಲ್ಲರೂ ಪ್ರತಿ ಶನಿವಾರವನ್ನು ಅತೀ ಕುತೂಹಲದಿಂದ ಎದುರು ನೋಡುತ್ತಾರೆ. ಆಸಕ್ತಿಯಿಂದಲೂ ಭಾಗವಹಿಸುತ್ತಾರೆ.

ಪ್ರತಿ ಶನಿವಾರ, ಒಂದೊಂದು ಹೊಸ ಬಗೆಯ ಚಟುವಟಿಕೆಗಳ ಮೂಲಕ ಮಕ್ಕಳ ಆಸಕ್ತಿಯನ್ನು ಕೆರಳಿಸಿ ಅವರಿಗೆ ಮನರಂಜನೆಯ ಜೊತೆಗೆ ಪಠ್ಯಕ್ರಮದ ವಿಷಯಗಳನ್ನು ತಿಳಿಸಾಗುತ್ತದೆ.

ಉದಾ: ಚಿತ್ರಕಲೆ, ಕ್ವಿಜ್, ರಂಗೋಲಿ ಸ್ಪರ್ಧೆ, ಐತಿಹಾಸಿಕ ಸ್ಥಳಗಳ ಪರಿಚಯ ಮುಂತಾದವು.





- **<u>ಕ್ಷೇತ್ರ ಭೇಟಿ (Field Visit)</u> :-**

ನಮ್ಮ ಶಾಲೆಯ ಮಕ್ಕಳಲ್ಲಿ ಜ್ಞಾನವು ಸಿಗಬೇಕೆಂಬ ದೃಷ್ಟಿಯಿಂದ ಕ್ಷೇತ್ರ ಭೇಟಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಪ್ರತಿ ವರ್ಷದಂತೆ ಈ ವರ್ಷವೂ ಮಕ್ಕಳನ್ನು ಹೊಲದಲ್ಲಿ ಕರೆದುಕೊಂಡು ಹೋಗಿ ಮಕ್ಕಳಿಗೆ ಭೂಮಿಯನ್ನು ಉಳುಮೆ ಮಾಡಿ ನಾಟಿಹೇಗೆ ಮಾಡುವುದು, ಸಸಿಗಳನ್ನು ಹೇಗೆ ಕೀಳುವುದು ನಂತರ ಪೈರು ಬೆಳೆದು ತೆನೆ ಭರಿತ ಪೈರನ್ನು ಕಟಾವು ಮಾಡುವುದು. ಹೀಗೆ ಕೃಷಿಯ ಹಲವಾರು ಹಂತಗಳನ್ನು ಮಕ್ಕಳಿಗೆ ವಿವರಿಸುತ್ತಾ, ಪ್ರಯೋಗಿಕ ಅನುಭವದೊಂದಿಗೆ ಮನರಂಜನೆಯ ಮಹಾಪೂರವು ದೊರೆಯುವಂತಾಗಲು ಈ ಕ್ಷೇತ್ರ ಭೇಟಿಯು ತುಂಬಾ ಸಹಾಯಕವಾಯಿತು.





* **<u>ಸಾಧಕರ ಜೊತೆ ಸೋಮವಾರ</u> :**

"Zee ಕನ್ನಡ "ವಾಹಿನಿಯಲ್ಲಿ ಬರುವ ವಿಕೇಂಡ್ ವಿಥ್ ರಮೇಶ ರಿಯಾಲಟಿ ಶೋ ಮಾದರಿಯಲ್ಲಿಯೇ ನಮ್ಮ ಸರ್ಕಾರಿ ಶಾಲೆಯಲ್ಲಿಯೂ "ಸಾಧಕರ ಜೊತೆ ಸೋಮವಾರ" ಎನ್ನುವ ನೂತನ ಚಟುವಟಿಕೆನ್ನು ಆರಂಭಿಸಲಾಯಿತು. ಈ ಕಾರ್ಯಕ್ರಮವನ್ನು ನಮ್ಮ ಶಾಲೆ ಪ್ರಭಾರಿ ಮುಖ್ಯೋಪಾಧ್ಯಾಯರಾದ ಶ್ರೀ. ಬಿ.ಎಸ್. ಸುಂಗಾರಿ ಸರ್ ಅವರು ನಡೆಸಿಕೊಡುತ್ತಾರೆ. ಮಕ್ಕಳ ಶೈಕ್ಷಣಿಕ ಪ್ರಗತಿ ಹಾಗೂ ಕ್ರಿಯಾ ಚಟುಟಿಕೆಗಳನ್ನಾಧರಿಸಿ ಒಬ್ಬ ಸಾಧಕ ವಿದ್ಯಾರ್ಥಿಯನ್ನು ಆಯ್ಕೆ ಮಾಡಲಾಗುತ್ತದೆ.

ಪ್ರತಿ ತಿಂಗಳ ಮೊದಲನೆ ಸೋಮವಾರದಂದು ಈ ಕಾರ್ಯಕ್ರಮ ನಡೆಸಲಾಗುತ್ತದೆ. ಆಯ್ಕೆಯಾದ ವಿದ್ಯಾರ್ಥಿಯ ಬಗ್ಗೆ ಅವರ ಸ್ನೇಹಿತರಿಗೆ ಶಿಕ್ಷಕರಿಗೆ ಹಾಗೂ ಅವರ ಪಾಲಕರಿಗೆ ಇರುವ ಅಭಿಪ್ರಾಯಗಳ ಶಾರ್ಟ ವಿಡಿಯೋಗಳನ್ನು ಡಿಜಿಟಲ್ ಬೋರ್ಡನಲ್ಲಿ ತೋರಿಸಲಾಗುತ್ತದೆ. ಹಾಗೂ ಆಯ್ಕೆಯಾದ ವಿದ್ಯಾರ್ಥಿಯು ಮಾಡಿದ ಶೈಕ್ಷಣಿಕ ಸಾಧನೆಯನ್ನು ಭಾಗವಹಿಸುವಿಕೆಯನ್ನು ಇನ್ನುಳಿದ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿ ಎಲ್ಲಾ ಮಕ್ಕಳು ಕ್ರಿಯಾಶೀಲರಾಗುವಂತೆ ನೋಡಿಕೊಳ್ಳಬಹುದಾಗಿದೆ.



- **<u>ಭಾರತೀಯ ರೂಪಾಯಿ ನೋಟುಗಳ ಪರಿಚಯ</u>** :

ಭಾರತೀಯ ರಿಸರ್ವ ಬ್ಯಾಂಕ್ ಮುದ್ರಿಸಿರುವ ನೂತನ ನೋಟುಗಳ ಕುರಿತು ಸವಿಸ್ತಾರವಾಗಿ ಹೇಳುತ್ತಾರೆ. ರೂ. 20, ರೂ.50, ರೂ.100 ರೂ.200 ಹಾಗೂ ರೂ.500 ನೋಟುಗಳ ಮೇಲಿರುವ ಐತಿಹಾಸಿಕ ಸ್ಥಳಗಳ ಪರಿಚಯ ಆ ಸ್ಥಳದ ವಿಶೇಷತೆ, ನೋಟಿನ ವಿನ್ಯಾಸ, ಬಣ್ಣ, ಗಾತ್ರ, ಹಾಗೂ ಆ ನೋಟಿನ ಮೇಲೆ ಮುದ್ರಿತವಾಗಿರುವ ಭಾಷೆಗಳು ಹೀಗೆ ನೋಟಿನ ಕುರಿತು ಹತ್ತು ಹಲವು ಅಂಶಗಳನ್ನು ನಮ್ಮ ಶಾಲೆಯ ಚಾಂಪ್ಸ್ ವಿವರಿಸುತ್ತಾರೆ. ಇದರಿಂದ ನೋಟಿನ ಮಾಹಿತಿ ಜೊತೆಗೆ ಅದರ ಮೇಲಿರುವ ವಿಶ್ವಪರಂಪರೆ ತಾಣಗಳಾದ ಐತಿಹಾಸಿಕ ಸ್ಥಳಗಳ ಪರಿಚಯವು ಉಂಟಾಗುತ್ತದೆ.





- <u>**ರಂಗೋಲಿಯಲ್ಲಿ ಅರಳಿದ ವಿಜ್ಞಾನ ಚಿತ್ರಗಳು**</u> :

ದಸರಾ ರಜೆ ಎಂದರೆ ಮಕ್ಕಳಿಗೆ ಮಜವೋ ಮಜ, ರಜೆಯ ಮಜದ ಮತ್ತಿನಲ್ಲಿರುವ ಮಕ್ಕಳಿಗೆ ನಮ್ಮ ಶಾಲೆಯ ಸುಂಗಾರಿ ಸರ್ ಒಂದು ಚಟುವಟಿಕೆಯನ್ನು ತರಗತಿಯ ವಾಟ್ಸ್ ಆಪ್ಸ್ ಗ್ರುಪ್ ಗಳ ಮೂಲಕ ನೀಡಿದರು. ಆ ಒಂದು ಟಾಸ್ಕನ್ನು ಎಲ್ಲ ಮಕ್ಕಳು ಅತ್ಯಂತ ಖುಷಿಯಿಂದ ಮಾಡಿದರು. ಎಲ್ಲರೂ ತಮ್ಮ ಮನೆಯ ಅಂಗಳದಲ್ಲಿ ರಂಗೋಲಿಯಿಂದ ವಿಜ್ಞಾನದ ಚಿತ್ರಗಳನ್ನು ಬಿಡಿಸಿ ಬಣ್ಣ ತುಂಬಿ, ಭಾಗಗಳನ್ನು ವಿವರಿಸುತ್ತಾರೆ.

ಈ ಒಂದು ಟಾಸ್ಕನ್ನು ಮುಗಿಸಿ ವಿಡಿಯೋಗಳನ್ನು ಮಾಡಿ ತಮ್ಮ ತರಗತಿ ವಾಟ್ಸ್ ಅಪ್ ಗ್ರುಪ್ ಗಳಿಗೆ ಹಾಕಿದಾಗ ತಮ್ಮ ವಿದ್ಯಾರ್ಥಿಗಳ ಪ್ರತಿಭೆಗಳನ್ನು ನೋಡುವ ಮತ್ತೊಂದು ಅವಕಾಶ ನಮಗೆ ಕಲ್ಪಿಸಿಕೊಟ್ಟಂತಾಯಿತು.





- **<u>ಪರಿಸರ ಸ್ನೇಹಿ ಚಟುವಟಿಕೆಗಳು</u>** :

"ಕಸದಿಂದ ರಸ " ಎಂಬಂತೆ ಅನುಪಯುಕ್ತ ವಸ್ತುಗಳನ್ನು ಪುನರ್ ಬಳಕೆ ಮಾಡಿ ನಮ್ಮ ಶಾಲೆಯ ವಿದ್ಯಾರ್ಥಿಗಳು ಬಣ್ಣ ಬಣ್ಣದ ಹೂ ಕುಂಡುಗಳನ್ನು ತಯಾರಿಸಿ, ಅದರಲ್ಲಿ ಪ್ರತಿಯೊಬ್ಬರು ಒಂದೊಂದು ಸಸಿ, ನೆಟ್ಟು, ನೀರುಣಿಸಿ, ಬೆಳಸಿ ನಮ್ಮ ಶಾಲೆಯ ಅಂದವನ್ನು ಹೆಚ್ಚಿಸಿದ್ದಾರೆ. "ಹಸಿರೇ ಉಸಿರು" ಎಂಬ ಮಾತನ್ನು ನಿಜ ಮಾಡಿದ್ದಾರೆ. ಇನ್ನೂ ಕೆಲವರು ಕಡಿಮೆ ಖರ್ಚಿನಲ್ಲಿ ದೊರೆಯುವ ವಸ್ತುಗಳಿಂದ Hanging Pots ಗಳನ್ನು ತಯಾರಿಸಿ, ತಮ್ಮ ಪ್ರತಿಭೆಯನ್ನು ಇಡೀ ಶಾಲೆಗೆ ತೋರಿಸಿದ್ದಾರೆ. ಅನುಪಯುಕ್ತ ಬಾಟಲ್ಸ್, ಡಬ್ಬಗಳು ಟೈಯರ್ಸ ಮುಂತಾದವುಗಳನ್ನು ಬಳಸಿ ಶಾಲಾ ಪರಿಸರವನ್ನು ಹಸಿರುಮಯ ವನ್ನಾಗಿಸಿದ್ದಾರೆ.



- **“ಶಿಕ್ಷಣದಲ್ಲಿ ತಂತ್ರಜ್ಞಾನ (AR, VR and AI)** :







- **ಧಾನ್ಯಗಳಿಂದ ಮತ್ತು ಪುಷ್ಪಗಳಿಂದ ರಂಗೋಲಿ ಬಿಡಿಸುವುದು :**

ನಮ್ಮ ಶಾಲೆಯ ಮಕ್ಕಳಲ್ಲಿ ಹೊಸ ಹೊಸ ಪ್ರತಿಭೆಗಳನ್ನು ಹೊರಹಾಕು ಉದ್ದೇಶಗಳಿಂದ ಹಲವಾರು ವಿನುತನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಅವುಗಳಲ್ಲಿ ಇದು ಒಂದು. ಸಾಮಾನ್ಯವಾಗಿ ರಂಗೋಲಿ ಬಣ್ಣದ ರಂಗೋಲಿಯಿಂದ ಚಿತ್ರ ಬಿಡಿಸುವುದು ಸರ್ವೇಸಾಮಾನ್ಯ. ಆದರೆ ನಮ್ಮ ಶಾಲೆಯಲ್ಲಿ ಧಾನ್ಯಗಳಿಂದ ತರಕಾರಿಗಳಿಂದ ಚಿತ್ರ ಬಿಡಿಸಿ ಅಲಂಕರಿಸುವುದು ನಮ್ಮ ಶಾಲೆಯ ವಿಶೇಷತೆಯಾಗಿದೆ. ಇದರಿಂದ ಮಕ್ಕಳಲ್ಲಿ ಸೃಜನಶೀಲತೆ ಮೂಡುತ್ತದೆ ವಸ್ತುಗಳನ್ನು ಯಾವುದಕ್ಕೆಲ್ಲ ಮರುಬಳಕೆ ಮಾಡಬಹುದೆಂಬ ಹಲವಾರು ವಿಷಯಗಳು ತಿಳಿಯುತ್ತವೆ. ಹಲವಾರು ಮಕ್ಕಳಲ್ಲಿ ಸೃಜನ್ಶೀಲತೆ ಈ ಚಟುವಟಿಕೆಯಲ್ಲಿ ವ್ಯಕ್ತವಾಗುತ್ತದೆ.





- **ಕವಿಗಳು ಮತ್ತು ಸಮಾಜ ಸುಧಾರಕರು ಮತ್ತು ವಿಜ್ಞಾನಿಗಳ ಪರಿಚಯ :**

ನಮ್ಮ ಶಾಲೆಯಲ್ಲಿ ಏರ್ಪಡಿಸುವ ಕವಿಗಳು ಸಮಾಜ ಸುಧಾರಕರು ಮತ್ತು ವಿಜ್ಞಾನಿಗಳ ಪರಿಚಯ ಹೇಳುವ ಕಾರ್ಯಕ್ರಮದಿಂದ ಮಕ್ಕಳಲ್ಲಿ ನಮ್ಮ ನಾಡ ಕವಿ ಪ್ರತಿಕಾರರ ಬಗ್ಗೆ ಮತ್ತು ಸಮಾಜ ಸುಧಾರಕರು ಅವರುಗಳ ಕಾರ್ಯಗಳ ಬಗ್ಗೆ ಮಾಹಿತಿ ವಿದ್ಯಾರ್ಥಿಗಳಿಗೆ ದೊರೆಯುತ್ತದೆ. ಅದರೊಂದಿಗೆ ವಿಜ್ಞಾನಿಗಳ ಪರಿಚಯ ಮಾಡುವುದರಿಂದ ಪ್ರತಿ ವಿದ್ಯಾರ್ಥಿ ತಮ್ಮಲ್ಲಿ ಒಬ್ಬ ವಿಜ್ಞಾನಿ ಕವಿ ಅಥವಾ ಸಮಾಜ ಸುಧಾರಕನಾಗುವ ಬಗ್ಗೆ ಆಸೆಯನ್ನು ವ್ಯಕ್ತಪಡಿಸುತ್ತಾನೆ. ಇದರಿಂದ ವಿದ್ಯಾರ್ಥಿಗಳಲ್ಲಿ ಕವಿಗಳ ಜನ್ಮ ದಿನಾಂಕ ಪ್ರಮುಖ ಕೃತಿಗಳು ಅವರಿಗೆ ಸಂತ ಪ್ರಶಸ್ತಿಗಳು ಹಾಗೂ ಬಿರುದುಗಳ ಜೊತೆಗೆ ವಿಜ್ಞಾನಿಗಳ ಸಂಶೋಧನೆಗಳು ಪ್ರಶಸ್ತಿಗಳ ಬಗ್ಗೆ ಸಮಾಜಕ್ಕೆ ಅವರ ಕೊಡುಗೆಗಳ ಬಗ್ಗೆ ಮಕ್ಕಳು ತಿಳಿದುಕೊಳ್ಳುತ್ತಾರೆ.





- **ವಿಜ್ಞಾನ ಮಾದರಿಗಳ ಪ್ರದರ್ಶನ ಮೇಳ :**

ನಮ್ಮ ಶಾಲೆಯ ಮಕ್ಕಳಿಗೆ ವೈಜ್ಞಾನಿಕ ಮನೋಭಾವನೆ ವಿಜ್ಞಾನದ ವಿಶೇಷತೆಯನ್ನು ಅರಿವಂತೆ ಮಾಡುವ ಉದ್ದೇಶದಿಂದ ನಮ್ಮ ಶಾಲೆಯಲ್ಲಿ ವಿಜ್ಞಾನ ಮಾದರಿಗಳ ಪ್ರದರ್ಶನ ಮೇಳವನ್ನು ಏರ್ಪಡಿಸಲಾಗಿತ್ತು. ವಿಜ್ಞಾನ ಎಂದರೆ ಏನು ಏಕೆ ಹೇಗೆ ಎಂಬ ಮುಂತಾದ ಪ್ರಶ್ನೆಗಳಿಗೆ ಉತ್ತರ ನೀಡುವ ಒಂದು ಅದ್ಭುತ ವಿಷಯವಾಗಿದೆ. ವಿಜ್ಞಾನದ ಮಾದರಿಗಳ ಪ್ರದರ್ಶನ ಮೇಳದಿಂದಾಗಿ ಮಕ್ಕಳಲ್ಲಿ ವಿಜ್ಞಾನ ವಿಷಯದ ಬಗ್ಗೆ ಆಸಕ್ತಿ ಮೂಡಿ ನಾವು ಏನಾದರೂ ಹೊಸದೊಂದು ವಿಚಾರದ ಕುರಿತು ತಿಳಿಯಬೇಕು ಎಂಬ ಮನೋಭಾವದಿಂದ ಇಂದಿನ ವಿದ್ಯಾರ್ಥಿಗಳು ಮುಂದಿನ ವಿಜ್ಞಾನಿಗಳಾಗಲು ಒಂದು ಸಣ್ಣ ಪ್ರಯತ್ನ ಮಾಡಿದಂತಾಗುತ್ತದೆ.







- **ಯೋಗ ದಿನಾಚರಣೆ :**

ಜೂನ್ 21 ಪ್ರತಿ ವರ್ಷ ಅಂತರಾಷ್ಟ್ರೀಯ ಯುಗಾದಿನಾಚರಣೆಯನ್ನು ನಮ್ಮ ಶಾಲೆಯಲ್ಲಿಯೂ ನಡೆಸಲಾಗುತ್ತದೆ. ಪ್ರತಿ ವರ್ಷ ಒಬ್ಬ ಯೋಗ ಪ್ರವೀಣರನ್ನು ಆಹ್ವಾನ ಮಾಡಿ ಅವರಿಂದ ಮಕ್ಕಳಿಗೆ ಆ ದಿನ ಬೆಳಿಗ್ಗೆ ಯೋಗಾಭ್ಯಾಸ ಮಾಡಿಸಲಾಗುತ್ತದೆ. ಯೋಗದ ಜೊತೆ ಪ್ರಾಣಾಯಾಮ ಸರಳ ವ್ಯಾಯಾಮಗಳನ್ನು ಮಕ್ಕಳಿಗೆ ಮಾಡಿಸುತ್ತಾ ಯೋಗದ ಮಹತ್ವವನ್ನು ತಿಳಿಸಿಕೊಡಲಾಗುತ್ತದೆ. ಇದರಿಂದ ಮಕ್ಕಳು ಪ್ರತಿದಿನ ತಮ್ಮ ಮನೆಗಳಲ್ಲಿಯೂ ಯುಗಾಭ್ಯಾಸ ಮತ್ತು ಪ್ರಾಣಾಯಾಮ ಮಾಡುವುದರಿಂದ ಮಕ್ಕಳಲ್ಲಿ ದೈಹಿಕ ಆರೋಗ್ಯ ಸುಧಾರಿಸಿ ಅವರ ಮಾನಸಿಕ ಆರೋಗ್ಯ ವೃದ್ಧಿಯಾಗುತ್ತದೆ. ಯೋಗ ದಿನಾಚರಣೆ ಜೂನ್ 21 ಪ್ರತಿ ವರ್ಷ ಅಂತರಾಷ್ಟ್ರೀಯ ಯುಗಾದಿನಾಚರಣೆಯನ್ನು ನಮ್ಮ ಶಾಲೆಯಲ್ಲಿಯೂ ನಡೆಸಲಾಗುತ್ತದೆ. ಪ್ರತಿ ವರ್ಷ ಒಬ್ಬ ಯೋಗ ಪ್ರವೀಣರನ್ನು ಆಹ್ವಾನ ಮಾಡಿ ಅವರಿಂದ ಮಕ್ಕಳಿಗೆ ಆ ದಿನ ಬೆಳಿಗ್ಗೆ ಯೋಗಾಭ್ಯಾಸ ಮಾಡಿಸಲಾಗುತ್ತದೆ. ಯೋಗದ ಜೊತೆ ಪ್ರಾಣಾಯಾಮ ಸರಳ ವ್ಯಾಯಾಮಗಳನ್ನು ಮಕ್ಕಳಿಗೆ ಮಾಡಿಸುತ್ತಾ ಯೋಗದ ಮಹತ್ವವನ್ನು ತಿಳಿಸಿಕೊಡಲಾಗುತ್ತದೆ. ಇದರಿಂದ ಮಕ್ಕಳು ಪ್ರತಿದಿನ ತಮ್ಮ ಮನೆಗಳಲ್ಲಿಯೂ ಯುಗಾಭ್ಯಾಸ ಮತ್ತು ಪ್ರಾಣಾಯಾಮ ಮಾಡುವುದರಿಂದ ಮಕ್ಕಳಲ್ಲಿ ದೈಹಿಕ ಆರೋಗ್ಯ ಸುಧಾರಿಸಿ ಅವರ ಮಾನಸಿಕ ಆರೋಗ್ಯ ವೃದ್ಧಿಯಾಗುತ್ತದೆ.








- **ಶೈಕ್ಷಣಿಕ ಪ್ರವಾಸ :**

ಶೈಕ್ಷಣಿಕ ಪ್ರವಾಸಕ್ಕೆ ನಮ್ಮ ಶಾಲೆಯ ವಿದ್ಯಾರ್ಥಿಗಳನ್ನು ಐತಿಹಾಸಿಕ ಸ್ಥಳಗಳಿಗೆ ಕರೆದುಕೊಂಡು ಹೋಗಿ ಅಲ್ಲಿ ಅವರಿಗೆ ಆ ಸ್ಥಳಗಳ ಕುರಿತು ಮಾಹಿತಿಯನ್ನು ನೀಡಲಾಗುತ್ತದೆ. ನಾವು ನಮ್ಮ ವಿದ್ಯಾರ್ಥಿಗಳನ್ನು ಬೇಲೂರು, ಹಳೇಬೀಡು , ಮೈಸೂರು ಐಹೊಳೆ, ಬಾದಾಮಿ ,ಪಟ್ಟದಕಲ್ಲು ಇನ್ನಿತರ ಸ್ಥಳಗಳಿಗೆ ಭೇಟಿ ನೀಡಿ ಆ ಸ್ಥಳಗಳ ಇತಿಹಾಸದ ವಿಶೇಷತೆ ಅದರ ಮಹತ್ವ ಹಾಗೂ ಅವುಗಳ ಸ್ಥಾಪನೆಯ ಹಿನ್ನೆಲೆ ಮುಂತಾದ ಅಂಶಗಳು ಮಕ್ಕಳಿಗೆ ಪರಿಚಯವಾಗುವಲ್ಲಿ ಸಹಾಯಕಾರಿಯಾಗಿದೆ.





- **ವಿಶೇಷ ಆಹ್ವಾನದ ಮೇರೆಗೆ ಜಿಐಟಿ ಇಂಜಿನಿಯರಿಂಗ್ ಕಾಲೇಜ್ ಮತ್ತು ಜಿಎನ್‌ಎಂಸಿ ವೈದ್ಯಕೀಯ ಕಾಲೇಜುಗಳಿಗೆ ಶೈಕ್ಷಣಿಕ ಭೇಟಿ :**

ನಮ್ಮ ಶಾಲೆಯ ಮಕ್ಕಳ ಚಟುವಟಿಕೆಗಳನ್ನು ಫೇಸ್ಬುಕ್ನಲ್ಲಿ ನೋಡಿ ಅವರ ಕಾಲೇಜುಗಳಲ್ಲಿ ನಡೆಯುವ ವಿಜ್ಞಾನ ಚಟುವಟಿಕೆಗಳನ್ನು ಮತ್ತು ಮಾದರಿಗಳನ್ನು ವೀಕ್ಷಿಸಲು ನಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ವಿಶೇಷ ಆಹ್ವಾನವನ್ನು ನೀಡಲಾಗಿತ್ತು. ಆದ್ದರಿಂದ ನಮ್ಮ ಶಾಲೆಯ ಮಕ್ಕಳನ್ನು ಜಿಐಟಿ ಇಂಜಿನಿಯರಿಂಗ್ ಕಾಲೇಜ್ ಮತ್ತು ಜಿಎನ್‌ಎಂಸಿ ವೈದ್ಯಕೀಯ ಕಾಲೇಜುಗಳಿಗೆ ಕರೆದುಕೊಂಡು ಹೋಗಿ ಮಕ್ಕಳಿಗೆ ವಿನೂತನ ಅನುಭವದೊಂದಿಗೆ ಪಠ್ಯ ವಸ್ತುವಿನಲ್ಲಿರುವ ಹಲವಾರು ವಿಷಯಗಳ ಅರಿವು ಉಂಟಾಯಿತು.





- **ನಮ್ಮ ಶಾಲೆಯಲ್ಲಿ ಒಂದು "ಜ್ಞಾನಾಂಬುಧಿ"ಗ್ರಂಥಾಲಯ :**

ನಮ್ಮ ಶಾಲೆಯಲ್ಲಿ ಸುಮಾರು 5000ಕ್ಕೂ ಹೆಚ್ಚು ಪುಸ್ತಕಗಳನ್ನೊಳಗೊಂಡ ಸುಸ್ಜಿಜ್ಜತ ಗ್ರಂಥಾಲಯವಿದೆ. ಸುಸಜ್ಜಿತ ಕಟ್ಟಡ ಒಳ್ಳೆಯ ಗಾಳಿ ಬೆಳಕಿನ ವ್ಯವಸ್ಥೆ ಇದ್ದು ಮಕ್ಕಳಿಗೆ ಪ್ರಶಾಂತವಾಗಿ ಓದಲು ಈ ಪರಿಸರ ಅನುಕೂಲಕರವಾಗಿದೆ. ನಮ್ಮ ಜ್ಞಾನಾಂಬುಧಿ ಗ್ರಂಥಾಲಯದಲ್ಲಿ ಮಕ್ಕಳ ಕಥೆ ಕವನಗಳ ಪುಸ್ತಕಗಳು ಅಧ್ಯಯನಕ್ಕೆ ಪೂರಕವಾದ ಪುಸ್ತಕಗಳು ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸಲು ಸಹಾಯವಾಗುವಂತಹ ಹಲವಾರು ಪುಸ್ತಕಗಳ ಬಂಡಾರವಿದೆ. ಇದು ಮಕ್ಕಳ ಜ್ಞಾನಾರ್ಜನೆಗೆ ತುಂಬಾ ಅನುಕೂಲಕರವಾಗಿದೆ. ಈ ಗ್ರಂಥಾಲಯದ ಸದುಪಯೋಗವನ್ನು ನಮ್ಮ ಶಾಲೆಯ ವಿದ್ಯಾರ್ಥಿಗಳಲ್ಲದೆ ನಮ್ಮ ಶಾಲೆಯಿಂದ ಕಲಿತು ಹೋದಂತಹ ಅನೇಕ ವಿದ್ಯಾರ್ಥಿಗಳು ಮತ್ತು ಊರ ಜನರು ಇದರ ಲಾಭವನ್ನು ಪಡೆಯುತ್ತಾರೆ.






- **Traditional day :**

ನಮ್ಮ ಹಿಂದೂ ಸಂಸ್ಕೃತಿಯನ್ನು ಬಿಂಬಿಸಲು ಒಂದು ದಿನ ಟ್ರಡಿಷನಲ್ ಡೇ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಆ ದಿನ ವಿದ್ಯಾರ್ಥಿಗಳು ತಮ್ಮ ತಮ್ಮ ಆಯ್ಕೆಗಳು ತಮ್ಮ ತಮ್ಮ ಸಂಸ್ಕೃತಿಯನ್ನು ಬಿಂಬಿಸುವ ವೇಷಭೂಷಣ ಧರಿಸಿ ಬಂದಿದ್ದರು. ಈ ಕಾರ್ಯಕ್ರಮದಿಂದ ಆಶಾತ ಉಡುಗೆ ತೊಡಗಿಗಳಿಗೆ ಆಕರ್ಷಿತರಾದ ನಮ್ಮ ಯುವಜನತೆಗೆ ನಮ್ಮ ಸಂಸ್ಕೃತಿಯ ಮಹತ್ವ ವಿಶೇಷತೆಯನ್ನು ಮನದಟ್ಟು ಮಾಡಿದಂತಾಗುತ್ತದೆ.







- ## ನಮ್ಮ ಶಾಲೆಗೆ ಗಣ್ಯ ವ್ಯಕ್ತಿಗಳ ಭೇಟಿ :

ನಮ್ಮ ಶಾಲೆಯ ಮಕ್ಕಳ ವಿನೂತನ ಚಟುವಟಿಕೆಗಳನ್ನು ಹಾಗೂ ನಮ್ಮ ಶಾಲೆಯ ಸೂಸಜ್ಜಿತಪ್ರಯೋಗಾಲಯಗಳನ್ನು ಗ್ರಂಥಾಲಯವನ್ನು ವೀಕ್ಷಿಸಲು ಹಲವಾರು ಗಣ್ಯ ವ್ಯಕ್ತಿಗಳು ನಮ್ಮ ಶಾಲೆಗೆ ಭೇಟಿ ನೀಡಿದ್ದಾರೆ. ನಮ್ಮ ಶಾಲೆಯ ವಾತಾವರಣ ಮಕ್ಕಳ ಶೈಕ್ಷಣಿಕ ಪ್ರಗತಿ ಚಟುವಟಿಕೆಗಳಲ್ಲಿ ಮಕ್ಕಳ ಭಾಗವಹಿಸುವಿಕೆ ಪ್ರಯೋಗಾಲಯಗಳ ಸದ್ಬಳಕೆಯನ್ನು ನೋಡಿ ಮೆಚ್ಚುಗೆಯನ್ನು ವ್ಯಕ್ತಪಡಿಸಿರುತ್ತಾರೆ.









- **ಶಾಲಾ ಅವರಣದಲ್ಲಿ ಬಣ್ಣ ಬಣ್ಣದ ರಂಗೋಲಿಗಳು :**

ನಮ್ಮ ಶಾಲೆಯ ಮಕ್ಕಳಿಗೆ ವಿಶೇಷ ಚಟುವಟಿಕೆಯನ್ನು ನೀಡಲಾಗಿತ್ತು ಅದೇ ಶಾಲಾ ಅವರಂದದಲ್ಲಿ ಬಣ್ಣ ಬಣ್ಣದ ರಂಗೋಲಿಯಿಂದ ವಿಜ್ಞಾನದ ಚಿತ್ರಗಳನ್ನು ಭಾರತ, ಕರ್ನಾಟಕದ ನಕ್ಷೆಗಳನ್ನು ಬಿಡಿಸುವುದು ಇದರಿಂದಾಗಿ ಮಕ್ಕಳಲ್ಲಿ ಏನೋ ಒಂದು ಹೊಸತನದ ಅನುಭವ ಉಂಟಾಗಿ ಆಸಕ್ತಿಯಿಂದ ಜೊತೆಗೆ ಕುತೂಹಲದಿಂದ ಭಾಗವಹಿಸಿ ತಮ್ಮ ಪ್ರತಿಭೆಗಳನ್ನು ಅನಾವರಣ ಮಾಡಿದರು ಈ ಚಟುವಟಿಕೆಯಿಂದ ಮಕ್ಕಳಲ್ಲಿ ವಿಜ್ಞಾನ ಚಿತ್ರಗಳು ಹಾಗೂ ಭಾರತದ ಹಲವಾರು ರಾಜ್ಯಗಳು ಅವುಗಳ ವಿಶೇಷತೆ ಬಗ್ಗೆ ತಿಳಿಯುವಂತಾಯಿತು.





- **ಹಸಿರು ಕ್ರಾಂತಿಯ ಇಕೋ ಕ್ಲಬ್ ಕಾರ್ಯ ಚಟುವಟಿಕೆಗಳು :**

ಇಕೋ ಕ್ಲಬ್ ವತಿಯಿಂದ ಮಕ್ಕಳಲ್ಲಿ ಹಲವಾರು ವಿನೂತನ ಚಟುವಟಿಕೆಗಳನ್ನು ಮಾಡಿಸಲಾಗುತ್ತದೆ. ಗಣ್ಯ ವ್ಯಕ್ತಿಗಳಿಂದ ಪರಿಸರದ ಬಗ್ಗೆ ಜಾಗೃತಿ ಮೂಡಿಸುವುದು ಜಾಗೃತಿ ಜಾತ ಹೋಗೋದು ಬೀದಿ ನಾಟಕವನ್ನು ಮಾಡಿಸುವುದರ ಜೊತೆಗೆ ಜನರಲ್ಲಿ ಪರಿಸರದ ಮಹತ್ವ ಅದರ ಸಂರಕ್ಷಣೆಯ ಅವಶ್ಯಕತೆಯ ಕುರಿತು ಮಾಹಿತಿ ನೀಡಲಾಯಿತು.





- **ಮಾದರಿ ಸಂತೆ :**

ನಮ್ಮ ಶಾಲೆಯ ನಲಿ-ಕಲಿ ಪುಟಾಣಿಗಳಿಂದ ಮಾದರಿ ಸಂತೆಯನ್ನು ಏರ್ಪಡಿಸಲಾಗಿತ್ತು. ಇದರಿಂದ ಮಕ್ಕಳಲ್ಲಿ ಸಂತೆ ಎಂದರೆ ಯಾವ ಯಾವ ವಿಚಾರಗಳಿರುತ್ತವೆ, ಯಾವ ಯಾವ ಚಟುವಟಿಕೆಗಳು ನಡೆಯುತ್ತವೆ ಎಂಬ ವಿಷಯಗಳ ಬಗ್ಗೆ ತಿಳಿಸಲಾಯಿತು. ಮಾದರಿ ಸಂತೆಯಿಂದಾಗಿ ಮಕ್ಕಳಲ್ಲಿ ತೂಕ ನಕಾಶೆ ವ್ಯವಹಾರದ ಬಗ್ಗೆ ಅರಿವು ಮೂಡಿಸಲಾಯಿತು.

